S. C. No.02/2019
PW.04

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 02/2019**

**ದೋ.ಸಾ. : 07  ಫ್ರಾ.ಸಾ. : 04**

**ದಿನಾಂಕಃ 22-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಆರ್.ವಿ.ಎನ್ ವಕೀಲರಿಂದ**

6. ನಾವು ನಮ್ಮ ಗದ್ದೆಯಲ್ಲಿ ಮಾತ್ರ ಕೆಲಸ ಮಾಡುತ್ತೇವೆ. ಎಕರೆಗಟ್ಟಲೇ ಕೃಷಿ ಮಾಡಲು ಆಳುಗಳ ಅವಶ್ಯಕತೆ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ಮನೆಯಲ್ಲಿ 8 ಜನರು ಇರುತ್ತಾರೆ, ಆದ್ದರಿಂದ ನಮ್ಮ ಕೃಷಿ ಕೆಲಸವನ್ನು ನಾವೇ ಮಾಡುತ್ತೇವೆ ಎಂದು ನುಡಿಯುತ್ತಾರೆ. ಒಬ್ಬ ವ್ಯಕ್ತಿಯು 3 ಎಕರೆಯನ್ನು ಸಾಗುವಳಿ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಬರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಜಮೀನು ಹಾಗೂ ಚಾಸಾ-1 ರವರ ಜಮೀನು ಒಂದಕ್ಕೊಂದು ತಾಗಿಕೊಂಡಿರುತ್ತದೆ. ಸರ್ವೆ ನಂಃ 45/ಬ ರಲ್ಲಿ ಇರುವ ತಮ್ಮ ಮನೆಯಲ್ಲಿ ಚಾಸಾ-1 ರವರು ಉಳಿಯುತ್ತಾರೆ. ಚಾಸಾ-1 ರವರ ಮನೆಯ ನಂಬರ್ ನನಗೆ ಗೊತ್ತಿಲ್ಲ. ಚಾಸಾ-1 ರವರ ಮನೆಯಲ್ಲಿ ಚಾಸಾ-1 ರವರು ಮಾತ್ರ ಇರುತ್ತಾರೆ, ಆದರೆ ಅವರ ಮಕ್ಕಳು ಆಗಾಗ್ಗೆ ಬಂದು -ಹೋಗಿ ಮಾಡುತ್ತಾರೆ. ಚಾಸಾ-1 ರವರ ಮನೆಯು ಅವರ ಗದ್ದೆ ಜಮೀನಿನ ಸ್ವಲ್ಪ ಎತ್ತರದಲ್ಲಿರುತ್ತದೆ, ಅವರ ಜಮೀನು ಸ್ವಲ್ಪ ತಗ್ಗಿನಲ್ಲಿರುತ್ತದೆ.

7. ಘಟನೆಯ ಸಮಯದಲ್ಲಿ ನನ್ನ ಬಳಿ ಪೋನ್ ಇರಲಿಲ್ಲ, ಆದರೆ ನನ್ನ ಹೆಂಡತಿಯ ಬಳಿ ಇರುತ್ತದೆ. ನನ್ನ ಹೆಂಡತಿಯು ಆಶಾ ಕಾರ್ಯಕರ್ತೆಯಾಗಿದ್ದು, ಅವಳ ಕೆಲಸಕ್ಕೆ ನಿರ್ದಿಷ್ಟ ಸಮಯ ಇರುವುದಿಲ್ಲ. ಚಾಸಾ-1 ರವರು ತಮ್ಮ ಕೃಷಿ ಜಮೀನಿನ ಕೆಲಸಗಳನ್ನು ಅವಶ್ಯವಿದ್ದಾಗ ಆಳುಗಳನ್ನು ತೆಗೆದುಕೊಂಡು ಮಾಡಿಸುತ್ತಾರೆ. ನಾನು ಈ ಪ್ರಕರಣದ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ನವೆಂಬರ್ ತಿಂಗಳಲ್ಲಿ ಯಾವುದೇ ಉಳುಮೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಚಾಸಾ-1 ರವರ ಮನೆ ಕೂಗಳತೆ ದೂರದಲ್ಲಿರುತ್ತದೆ. ನಮ್ಮ ಮನೆಯಿಂದ ಚಾಸಾ-1 ರವರ ಮನೆ ಅರ್ಧ ಕಿ.ಮೀ ದೂರದಲ್ಲಿರುತ್ತದೆ ಎಂದರೆ ಸರಿಯಲ್ಲ. ನನಗೆ ಹಾಗೂ ಆರೋಪಿತರ ನಡುವೆ ವೈಷಮ್ಯ ಇರುತ್ತದೆ ಎಂದರೆ ಸರಿಯಲ್ಲ.

8. ಚಾಸಾ-1 ರವರ ಜಮೀನನ್ನು ನಾವೇ ಉಳುಮೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸರ್ವೆ ನಂಃ 45/ಬ ರಲ್ಲಿರುವ 2 ಎಕರೆ 32 ಗುಂಟೆ ಜಮೀನು ನಮಗೆ ರೈತನಾತೆಯಿಂದ ಅಂದರೆ ಉಳುವವನೆ ಒಡೆಯ ಹಕ್ಕಿನಡಿ ಬಂದಿರುತ್ತದೆ. ಸದರಿ ಜಮೀನು ಮೂಲತಃ ಚಾಸಾ-1 ರವರ ಕುಟುಂಬದ ಆಸ್ತಿ ಎಂದರೆ ಸರಿ. ಚಾಸಾ-1 ರವರ ಮನೆಗೆ ತೋಟದಿಂದಲೂ ಸಹ ಬರಬಹುದು ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಕಳ್ಳರು ಬಂದಾಗ ಹಿಂದಿನ ಬಾಗಿಲಿನಿಂದ ಬರುತ್ತಾರೆ ಎಂದರೆ ಸರಿ. ದಿಃ 12-11-2017 ರಂದು ನಾವು ನಮ್ಮ ಜಮೀನಿನಲ್ಲಿ ಉಳುವೆ ಮಾಡುತ್ತಿರಲಿಲ್ಲ ಹಾಗೂ ಆರೋಪಿತರು ಸಹ ಆ ದಿನ ಚಾಸಾ-1ರವರ ಮನೆಯ ಹತ್ತಿರ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರು ಆರೋಪಿತರಿಗೆ ಯಾಕೆ ಇಲ್ಲಿ ಉಳುವೆ ಮಾಡುತ್ತಿದ್ದೀರಿ ಎಂದು ಕೇಳಿರುವುದಿಲ್ಲ ಹಾಗೂ ಆರೋಪಿತರು ಚಾಸಾ-1ರವರಿಗೆ ಬೋಳಿ ರಂಡೆ, ಮುದಿ ರಂಡೆ, ಕುನ್ನಿ , ನೀನು ಯಾಕೆ ಪದೆ-ಪದೇ ನಮ್ಮ ಮೇಲೆ ಕೇಸು ಹಾಕುತ್ತೀಯಾ, ನಿನ್ನನ್ನು ಇಲ್ಲಿಯೇ ಮಣ್ಣು ಮುಕ್ಕಿಸುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಚಾಸಾ-1 ರವರನ್ನು ಮನೆಯ ಒಳಗೆ ದೂಡಿ, ಬಾಗಿಲ ಚಿಲಕ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರಿಗೆ ಸೇರಿದ ಮನೆಯು ಹಾಳು ಬಿದ್ದಿದ್ದು, ಅಲ್ಲಿ ಯಾರು ಉಳಿಯುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ದೂರು ಕೊಡುವ ಸಮಯದಲ್ಲಿ ನಾನು ಹೋಗಿರುವುದಿಲ್ಲ ಎಂದರೆ ಸರಿ. ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

9. ದಿಃ 12-11-2017 ರಂದು ರಾತ್ರಿ ನಾನು ನನ್ನ ಪರಿಚಯದವರಾದ ದತ್ತಾತ್ರೆಯವರ ಮನೆಗೆ ಹೋಗಿ ಬರುತ್ತಿದ್ದೆ. ದಿಃ 12-11-2017 ರಂದು ರಾತ್ರಿ 11-00 ಗಂಟೆ ಸಮಯದಲ್ಲಿ 1ನೇ ಆರೋಪಿಯು ತನ್ನ ಕೈಯಲ್ಲಿ ಸೀಮೆಎಣ್ಣೆ ಕ್ಯಾನ್, ಬೆಂಕಿ ಪೊಟ್ಟಣ ಹಾಗೂ ಕಟ್ಟಿಗೆಯ ಪಂಜನ್ನು ಹಿಡಿದುಕೊಂಡು ಚಾಸಾ-1ರವರ ಮನೆಯ ಬಳಿ ಹೋಗಿರುವುದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಆರೋಪಿಯು ಚಾಸಾ-1 ರವರನ್ನು ಸುಟ್ಟು ಹಾಕುತ್ತೇನೆ ಎಂದು ಊರಿನ ಜನರ ಬಳಿ ಹೇಳುತ್ತಾ ಬರುತ್ತಿದ್ದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅಂಕೋಲಾ ಪೊಲೀಸರು 1ನೇ ಆರೋಪಿಯನ್ನು ಎರಡು ಜನ ಪಂಚರೊಂದಿಗೆ ಚಾಸಾ-1 ರವರ ಮನೆಯ ಬಳಿ ಕರೆದುಕೊಂಡು ಬಂದಿಲ್ಲ ಹಾಗೂ ಅಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಮುದ್ದೆ ಮಾಲು-1 ರಿಂದ 3 ವಸ್ತುಗಳನ್ನು

ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಂಕೋಲಾ ಪೊಲೀಸರು 1 ನೇ ಆರೋಪಿಯನ್ನು ಚಾಸಾ-1 ರವರ ಮನೆಯ ಬಳಿ ಕರೆದುಕೊಂಡ ಬಂದಾಗ, ಆತ ತಾನು ಚಾಸಾ-1 ರವರನ್ನು ಸುಟ್ಟು ಹಾಕಲು ಸೀಮೆಎಣ್ಣೆ, ಬೆಂಕಿ ಪೊಟ್ಟಣ ಹಾಗೂ ಪಂಜನ್ನು ತಂದಿರುತ್ತೇನೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

10. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಬೆಳಗಿನ 03-00 ಗಂಟೆ ಸಮಯದಲ್ಲಿ ಯಾರು ಜನರು ಓಡಾಡುವುದಿಲ್ಲ ಎಂದರೆ ಸರಿಯಲ್ಲ. ಮಿರ್ಜಾನ್ ಮುಖ್ಯ ರಸ್ತೆಯಿಂದ ನಮ್ಮ ಊರು ಸುಮಾರು 11 ಕಿ.ಮೀ ದೂರ ಇರುತ್ತದೆ. ಸದರಿ 11 ಕಿ.ಮೀ ರಸ್ತೆಯಲ್ಲಿ ಊರು ಸಹ ಇರುತ್ತವೆ ಹಾಗೂ ಅರಣ್ಯ ಸಹ ಇರುತ್ತದೆ. ಬ್ರಹ್ಮೂರಿನ ಎಲ್ಲಾ ಬೀದಿಗಳಲ್ಲಿ ಬೀದಿ ದೀಪಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಅವಶ್ಯ ಇರುವ ಕಡೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-1 ರವರೊಂದಿಗೆ ನಮ್ಮ ಒಡನಾಟ ಇರುವುದರಿಂದ ಹಾಗೂ ನಮಗೆ ಬೇಕಾದವರಾಗಿದ್ದರಿಂದ, ಅವರು ನೀಡಿದ ದೂರಿಗೆ ಅನುಕೂಲವಾಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಃ 45/ಬ ರಲ್ಲಿ ನಮಗೆ ಹಾಗೂ ಆರೋಪಿತರಿಗೆ ಮಂಜೂರಾಗಿದ್ದು, ಆರೋಪಿತರಿಗೆ ಮಂಜೂರಾದ ಜಮೀನಿಗೆ ಚಾಸಾ-1 ರವರು ತಕರಾರು ಮಾಡುತ್ತಿದ್ದು, ನಮಗೆ ಮಂಜೂರಾದ ಜಮೀನಿಗೆ ಚಾಸಾ-1 ರವರು ತಕರಾರು ಮಾಡುತ್ತಿಲ್ಲದ ಕಾರಣ, ಚಾಸಾ-1 ರವರಿಗೆ ಸಹಾಯವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಸಲ್ಲಿಸಿದ ದೂರಿಗೆ ಪೂರಕವಾಗುವಂತೆ ಸಾಕ್ಷ್ಯ ನುಡಿಯದೆ ಇದ್ದರೇ, ಚಾಸಾ-1 ರವರು ನಮಗೆ ಮಂಜೂರಾದ ಜಮೀನಿಗೆ ತಕರಾರು ಮಾಡಬಹುದು ಎಂಬ ಭಯದಿಂದ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ